**I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

| ಹೆಸರು | ಮೋನಪ್ಪ ಪಾಟೀಲ | O.S.No.1316/2014 |
|---|---|---|
| ವಾಸಸ್ಥಳ | ಬೆಳಗಾವಿ | ಡಿ . ಡಬ್ಲ್ಯೂಃ2 |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 14-01-2019.**

**ಪಾಟೀ ಸವಾಲು 5 ನೇ ವಾದಿ ಪರ ವಕೀಲರು ಶ್ರೀ ಆರ ಎ ಸಿ ರವರಿಂದ**

1. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ, ಮರಾಠಾ ಮಂಡಲದಲ್ಲಿ ಶಾಲೆಯಲ್ಲಿ ಓದಿರುತ್ತೇನೆ. ನಾನು ನನ್ನ ಜೀವನೋಪಯಕ್ಕಾಗಿ ಆಟೋ ರೀಕ್ಷಾ ಓಡಿಸುತ್ತೇನೆ. ನಾನು ಕೋಲ್ಲಾಪೂರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ತಾವು ಕೋಲ್ಲಾಪೂರದಲ್ಲಿ ಹಾಗೂ ಬೆಳಗಾವಿಯಲ್ಲಿ ಎರಡೂ ಕಡೆ ಇರುತ್ತೇನೆಂದು ಹೇಳುತ್ತಾರೆ. ಕೋಲ್ಲಾಪೂರದಲ್ಲಿ ನನಗೆ ವಾಸದ ಮನೆ ಇರುತ್ತದೆ.

2. ಈ ಕೇಸಿಗೆ ಮಾಹಿತಿಯನ್ನು ನಮ್ಮ ವಕೀರಿಗೆ ನಾನೇ ನೀಡಿರುತ್ತೇನೆ. ನನ್ನ ಲಿಖಿತ ತಕರಾರನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

3. ನಮ್ಮ ತಂದೆಗೆ 7 ಜನ ಗಂಡು ಮಕ್ಕಳು - ಜಾನರ್ದನ, ಬಸವಂತ, ಪಾಂಡರಂಗ , ಅರ್ಜುನ , ಮದುಕರ , ಸುರೇಶ ಮತ್ತು ನಾನು (ಮೋನಪ್ಪ) , 2 ಹೆಣ್ಣು ಮಕ್ಕಳು - ಅನುಸುಯಾ ಮತ್ತು ಯಲ್ಲವ್ವ. ಜನಾರ್ದನರವರು ನಮ್ಮ ದೊಡ್ಡ ಅಣ್ಣ, ಅವರು 4-5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಬಸವಂತ ರವರು ಸಹ ತೀರಿಕೊಂಡಿರುತ್ತಾರೆ. ನಮ್ಮ ತಂದೆಯವರು

ತೀರಿಕೊಂಡು 15 ವರ್ಷಗಳಾಗಿದೆ. ನಮ್ಮ ತಂದೆಗೆ ಆಸ್ತಿಗಳು ಇದ್ದವು. ಅವರ ಆಸ್ತಿಗಳ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ನಮ್ಮ ತಂದೆಯ ಆಸ್ತಿಗಳಲ್ಲಿ ನಾವು ವಾಟ್ನಿ ಮಾಡಿಕೊಂಡಿರುತ್ತೇವೆ. ವಾಟ್ನಿಯಲ್ಲಿ ಯಾರಿಗೆ ಎಷ್ಟು ಹಿಸ್ಸೆ ಬಂದಿರುತ್ತದೆ ಎಂದು, ನನಗೆ ಹೇಳಲು ಬರುವುದಿಲ್ಲ.

4. ಸರ್ವೆ ನಂ 639/2 ನೇದ್ದರಲ್ಲಿ **ವಾದಿ -ಪಾಂಡುರಂಗ** ಇವರಿಗೆ 6 ಗುಂಟೆ ಆಸ್ತಿ ವಾಟ್ನಿಯಲ್ಲಿ ಬಂದಿರುತ್ತದೆ ಎಂದರೆ ಸರಿ . ಪಾಂಡುರಂಗರವರು ನಮ್ಮ ತಂದೆಗೆ 3 ನೇ ಮಗನಾಗಬೇಕು. ಇವರು ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಇವರು ಸೇನೆಯಿಂದ ಯಾವಾಗ ನಿವೃತ್ತಿ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಇವರು ಸೇನೆಯಲ್ಲಿ 40 ವರ್ಷ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸುಮಾರು 18 ವರ್ಷ ಕೆಲಸ ಮಾಡಿರುತ್ತಾರೆ. ಇವರು 1981 ನೇ ಇಸ್ವಿಯಲ್ಲಿ ನಿವೃತ್ತಿ ಹೊಂದಿ, ಕಡೋಲಿ ಗ್ರಾಮಕ್ಕೆ ವಾಪಸ್ಸು ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನಿವೃತ್ತಿ ಹೊಂದಿ ಕಡೋಲಿ ಗ್ರಾಮಕ್ಕೆ ವಾಪಸ್ಸು ಬಂದ ಕಾಲಕ್ಕೆ, ನಾನು, ಬಸವಂತ, ವಾದಿ ಮತ್ತು ಸುರೇಶ ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವು . ನಾವೆಲ್ಲರೂ ಹುಟ್ಟಿದಾಗಿನಿಂದಲೂ ಒಟ್ಟಿಗೆ ವಾಸವಾಗಿದ್ದೇವು. ಮದುಕರ, ಅರ್ಜುನ ಮತ್ತು ಜನಾರ್ದನ ಇವರು ಬೇರೆ ಬೇರೆ ಇದ್ದರು. ಇವರೆಲ್ಲರೂ 1970 ನೇ ಇಸ್ವಿಯ ಸುಮಾರಿಗೆ ಬೇರೆ ಆಗಿರುತ್ತಾರೆ.

5. 1963 ನೇ ಇಸ್ವಿಯಲ್ಲಿ ವಾದಿ ಸೇನೆಯ ಕರ್ತವ್ಯಕ್ಕೆ ಸೇರಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ವಾದಿ ಸೇನೆಯಿಂದ ನಿವೃತ್ತಿ ಹೊಂದಿದ ನಂತರ, ಸರ್ವೆ ನಂ 62/1 ಆಸ್ತಿಯನ್ನು ರಾಜಾರಾಮ ತೋಪನ್ನ ಮುತಗೇಕರ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿದು, ವಾದಿ, ಬಸವಂತ, ಸುರೇಶ ಮತ್ತು ನಾನು **ಒಟ್ಟಿಗೆ** ಖರೀದಿ ಮಾಡಿರುತ್ತೇವೆಂದು ಹೇಳುತ್ತಾರೆ. ನಿವೃತ್ತಿ ಹೊಂದಿದ ನಂತರ, ಬಂದ ಹಣದಿಂದ ವಾದಿಯು ಸದರಿ ಆಸ್ತಿಯನ್ನು 21 ಸಾವಿರ ರೂ. ಗಳಿಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ರಾಜಾರಾಮ ತೋಪನ್ನ ಮುತಗೇಕರ ಇವರು ವಾದಿಯ ಹೆಸರಿಗೆ ಖರೀದಿ ಪತ್ರವನ್ನು ಮಾಡಿಕೊಟ್ಟು, ಆಸ್ತಿಯ ಕಬ್ಜೆಯನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ 1 ರ ಖರೀದಿ ಪತ್ರದಲ್ಲಿ ರಾಜಾರಾಮ ತೋಪನ್ನ ಮುತಗೇಕರ ಇವರು ಸದರಿ ಆಸ್ತಿಯನ್ನು ನಮ್ಮ 4 ಜನರಿಗೆ ಸೇರಿ ಖರೀದಿ ಮಾಡಿಕೊಟ್ಟಿರುತ್ತಾರೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿಃ 1 ರಲ್ಲಿ ಕೇವಲ ವಾದಿ-ಪಾಂಡುರಂಗ ಮತ್ತು ರಾಜಾರಾಮ ತೋಪನ್ನ ಮುತಗೇಕರ ಇವರುಗಳ ಸಹಿ ಇರುತ್ತವೆ ಎಂದರೆ ಸರಿ . ನಿಪಿಃ 1 ರ ಖರೀದಿ ಪತ್ರವು ಆರ ಎಸ ನಂ 62/1 ರಲ್ಲಿ 1 ಎಕರೆ 8 ಗುಂಟೆಗೆ ಸಂಬಂದಿಸಿದಂತೆ ಇರುತ್ತದೆ ಎಂದರೆ ಸರಿ. ನಿಪಿಃ 1 ರ ಖರೀದಿ ಪತ್ರದಂತೆ ಇಲ್ಲಿಯವರೆಗೂ ವಾದಿಯ ಸದರಿ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ತಾವು 4 ಜನರು ಸೇರಿ ಸದರಿ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಾಗಿ ಹೇಳುತ್ತಾರೆ- ಈ ಬಗ್ಗೆ - ಯಾವುದೇ ನೊಂದಾಯಿತ ದಾಖಲೆ ಇರುವುದಿಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಪಾಲು ವಿಭಾಗ ಆಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 1 ರ

ಖರೀದಿ ಪತ್ರದಂತೆ ವಾದಿಯ ಹೆಸರು ದಾವಾ ಆಸ್ತಿಗೆ ದಾಖಲಾಗಿರತ್ತದೆ ಎಂದರೆ ಸರಿಯಲ್ಲ. ನೀವು 4 ಜನರ ಹೆಸರುಗಳೂ ದಾವಾ ಆಸ್ತಿಯ ಉತಾರದಲ್ಲಿ ಹೇಗೆ ದಾಖಾಗಿರುತ್ತದೆ ಎಂದು ಕೇಳಲಾಗಿ, ಸಾಕ್ಷಿಯು, ತಮ್ಮ ನಡುವೆ ವಿಭಾಗ ಆದ ನಂತರ, ದಾಖಲಾಗಿರುತ್ತದೆ ಎಂದು ಹೇಳುತ್ತಾರೆ. ನಮ್ಮಲ್ಲಿ ಆದ ವಿಭಾಗದ ಪ್ರಕಾರ ನಮ್ಮ ಹೆಸರನ್ನು ದಾವಾ ಆಸ್ತಿಯ ಉತಾರದಲ್ಲಿ ದಾಖಲಿಸಲು ವಾದಿಯೇ ವರದಿಯನ್ನು ನೀಡಿರುತ್ತಾರೆ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೋ, ಇಲ್ಲವೋ ನನಗೆ ಗೊತ್ತಿಲ್ಲ. ವಾದಿಯು ಯಾವುದೇ ವರದಿಯನ್ನು ನೀಡದಿದ್ದರೂ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಮ್ಮ ಹೆಸರುಗಳು ದಾವಾ ಆಸ್ತಿಯ ಉತಾರದಲ್ಲಿ ದಿಃ 15-11-1986 ರಂದು ದಾಖಲಾಗಿರುತ್ತದೆ. ನಾನು ಸದರಿ ಉತಾರವನ್ನು ನೋಡಿರುತ್ತೇನೆ. ಸದರಿ ಉತಾರದಲ್ಲಿ ಯಾರಿಗೆ ಎಷ್ಟು ಹಿಸ್ಸೆ ಬಂದಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ . ನಮ್ಮ ಹೆಸರುಗಳಲ್ಲಿ ಬೇರೆ ಬೇರೆ ಉತಾರಗಳು ಇರುವುದಿಲ್ಲ ಎಂದರೆ ಸರಿ . ಇಂದಿಗೂ ದಾವಾ ಆಸ್ತಿಯ ಉತಾರದಲ್ಲಿ ಕೇವಲ ವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ನಿಪಿಃ 3 ರಂತೆ ದಾವಾ ಆಸ್ತಿಯ ಖಾತಾ ನಂಬರ 245 ಆಗಿದ್ದು , ಅದು ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ . **ನಾನು ಹೇಳುವಂತೆ** ಸದರಿ ಆಸ್ತಿಯಲ್ಲಿನ ನನ್ನ ಭಾಗಕ್ಕೆ ಸಂಬಂಧಿಸಿದ ಆಸ್ತಿಗೆ ಖಾತಾ ನಂಬರ ಕೊಡಲಾಗಿರುವುದಿಲ್ಲ. ನನ್ನ ಆಸ್ತಿಗೆ ಸಂಬಂಧಿಸಿದ ಎಮ ಇ ನಂ 921 / 86-87 ಇರುತ್ತದೆ. ಸದರಿ ಡೈರಿ ಎಂಟ್ರಿಯೂ ಖೊಟ್ಟಿ/ ಪೊಕಳ ಇರುತ್ತದೆ

ಎಂದರೆ ಸರಿಯಲ್ಲ.

7. ದಾವಾ ಆಸ್ತಿಯನ್ನು ವಾದಿಯು ಸೇನೆಯಿಂದ ನಿವೃತ್ತಿ ಹೊಂದಿದ ನಂತರ ಬಂದ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ವಾದಿಯೇ ಇಲ್ಲಿಯವರೆಗೂ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿ ಕುರಿತಂತೆ ನಮ್ಮಲ್ಲಿ ಆದ ವಿಭಾಗದ ನಂತರ, ನನ್ನ ಭಾಗಕ್ಕೆ ಬಂದ ಜಮೀನಿಗೆ ನಾನು ಪಂಪ್ ಸೇಟ್‌ಗಾಗಿ ಕೆ ಇ ಬಿ ಯಿಂದ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಖೊಟ್ಟಿ ಕಾಗದ ಪತ್ರಗಳನ್ನು ಕೆ ಇ ಬಿ ಗೆ ಸಲ್ಲಿಸಿರುತ್ತೇನೆ ಎಂದು ವಾದಿಯು ನಿಪಿಃ 15 ರಂತೆ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ಆನಂತರ, ಕೆ ಇ ಬಿಯವರು ವಿದ್ಯುತ್ ಸಂಪರ್ಕವನ್ನು ಖಡಿತಗೊಳಿಸುತ್ತಾರೆಯೇ ಎಂದರೆ ಸರಿಯಲ್ಲ.

9. ನಿಪಿಃ 1 ರ ಖರೀದಿ ಪತ್ರದಂತೆ ವಾದಿಯಷ್ಟೆ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದು, ಅವರೇ ಅದರ ಕಬ್ಜೆಯಲ್ಲಿರುತ್ತಾರೆ ಎಂದರೆ, ನಾನು ಒಪ್ಪುವುದಿಲ್ಲ. ಈ ದಾವೆಯನ್ನು ಹೊರುತುಪಡಿಸಿ, ನಮ್ಮ ಮತ್ತು ವಾದಿಯ ನಡುವೆ ಬೇರೆ ಯಾವುದೇ ವಾಟ್ನಿ ದಾವೆ ಇರುವುದಿಲ್ಲ. ವಾದಿಯೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿರುವುದರಿಂದ, ನಾವು ಯಾವುದೇ ವಾಟ್ನಿ ದಾವೆಯನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು

ಲಪಾಟಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿಯಿದೆ.**

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ,ಬೆಳಗಾವಿ